


ಚಿತ್ರ: ಸತೀಶ ಬಡಿಗೇರ್

ಉಪಯೋಗದ ಪಟ್ಟಿ ಬೆಳೆಯುತ್ತಾ ಸಾಗುತ್ತದೆ. ಈ ಓದು, ಸಾಧನೆಯ ಪ್ರಭಾವದಿಂದ ನೀವೂ ಓರ್ವ ಸಾಧಕರಾಗಬಹುದು. ನಾಳೆಯನ್ನು ಕಂಡವರಾರು? ವೈವಿಧ್ಯಮಯವಾದ ಓದು ಅರಿವಿನ ಹರುವನ್ನು ಹೆಚ್ಚಿಸುವುದಲ್ಲಿ ಸಹಕಾರಿ. ವಿದ್ಯಾಭ್ಯಾಸದ ಇಂಗ್ಲಿಷ್ ಭಾಷೆಯ ಜೊತೆಗೇ ನಮ್ಮ ಮಾತೃಭಾಷೆ ಯಾವುದೇ ಇರಲಿ, ಅದರ ಮೇಲೆ ನಮಗೊಂದು ಹಿಡಿತ, ಪ್ರಭುತ್ವ ಇರಬೇಕು. ಎಲ್ಲ ಭಾಷೆಗಳಲ್ಲಿಯೂ ಉತ್ತಮ, ಮೌಲಿಕ ಬರಹಗಳಿಗೆ ಬರವಿಲ್ಲ.

**ನಿಮ್ಮ ಓದು ಈ ಕೆಳಗಿನಂತಿರಲಿ:**

- ಪ್ರತಿ ನಿತ್ಯ ಒಂದಾದರೂ ದಿನಪತ್ರಿಕೆಯನ್ನು ಓದುವ ಅಭ್ಯಾಸವಿರಲಿ. ಸಮಯವಿಲ್ಲ ಎಂಬ ಕಾರಣ ಕೊಡಬೇಡಿ.
- ದಿನಪತ್ರಿಕೆಯ ಜೊತೆಗೆ ಒಂದು ವಾರ ಪತ್ರಿಕೆಯ ಓದೂ ಬೋನಸ್ ಇದ್ದಂತೆ.
- ದಿನಪತ್ರಿಕೆಯನ್ನು ಓದುವಾಗ ಬರೀ ನಿಮಗಿಷ್ಟವಾದ ರಾಜಕೀಯವನ್ನೋ, ಸಿನೆಮಾ ಪುಟವನ್ನೋ, ಕ್ರೀಡಾಪುಟವನ್ನೋ ಮಾತ್ರ ಓದಬೇಡಿ. ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲ ವಿಷಯಗಳ ಮೇಲೂ ನಿಮ್ಮ ಗಮನವಿರಲಿ.

ಉದಾಹರಣೆಗೆ ಯಾವುದೋ ಒಂದು ಟೆಂಡರ್ ನೋಟಿಸ್ ಅನ್ನೇ ತೆಗೆದುಕೊಳ್ಳಿ. ಅದು ಓರ್ವ ಇಂಜಿನಿಯರರ ಹೆಸರಿನಲ್ಲಿ ಇರಬಹುದು. ದೇಶದ ಕುರಿತಾದ ರಾಷ್ಟ್ರೀಯ ಪ್ರಾಮುಖ್ಯದ ಟೆಂಡರುಗಳಾದರೆ ಭಾರತದ ರಾಷ್ಟ್ರಪತಿಗಳ ಹೆಸರಿನಲ್ಲಿರಬಹುದು. ಇಂತವರು ನಿಧನರಾದರು, ಶಿವೈಕ್ಯರಾದರು, ಲಿಂಗೈಕ್ಯರಾದರು, ಪರಂಧಾಮಗೈದರು, ಮುಕ್ತರಾದರು, ಮುಂತಾಗಿ ಒಂದು ಸಾವನ್ನು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸುವುದನ್ನು ನೀವು ಗಮನಿಸಬಹುದು. ಚಿಕ್ಕ ಚಿಕ್ಕ ವರದಿಗಳಲ್ಲಿ ಮಾಹಿತಿಯ ಕಣಜ ತುಂಬಿರುತ್ತದೆ.

ಅನೇಕ ಬಾರಿ ವಸ್ತು ವಿಷಯ ಒಂದೇ ಆದರೂ ಕೂಡ ಒಂದೊಂದು ಪತ್ರಿಕೆಯವರು ಅದನ್ನು ಒಂದೊಂದು ರೀತಿಯಲ್ಲಿ ಓದುಗರೆದುರು ಪ್ರಸ್ತುತಪಡಿಸುತ್ತಾರೆ. ವರದಿಯಲ್ಲಿನ ಪದಗಳನ್ನು ಕಟ್ಟುವ ರೀತಿ, ಚಿತ್ರ ಮತ್ತು ವರದಿಯನ್ನು ವಿನ್ಯಾಸಗೊಳಿಸುವ ಪರಿ ಇವು ವಿಷಯದಷ್ಟೇ ಮುಖ್ಯವಾಗುತ್ತದೆ. ಓದುವಾಗ ವಿಷಯಕ್ಕೆ ಕೊಡುವಷ್ಟೇ ಮಹತ್ವವನ್ನು ಅಲ್ಲಿನ ಭಾಷೆ, ಬಳಸಿದ ಶಬ್ದ, ಉಪಯೋಗಿಸಿದ ನುಡಿಗಟ್ಟುಗಳಿಗೂ ಕೊಡಿ.

ನಿಮ್ಮ ಓದು ಕೇವಲ ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿರದೆ ಅದರ ವ್ಯಾಪ್ತಿ ಸೀಮೆ ದೇಶದ ಗಡಿಯಾಚೆಗೂ ವಿಸ್ತರಿಸಿರುವುದರಿಂದ ಭಾಷೆಯ ಸೊಗಸನ್ನು ಮತ್ತು ವೈವಿಧ್ಯತೆಯನ್ನು ಗಮನಿಸಬಹುದು. ನಿಮಗೆ ಅರ್ಥವಾಗದ ಪದಗಳ ಬಗ್ಗೆ, ನುಡಿಕಟ್ಟಿನ ಬಗ್ಗೆ, ಉಪಮೇಯ, ಸುಭಾಷಿತಗಳ ಬಗ್ಗೆ ಹಿರಿಯರನ್ನು ಕೇಳಿ. ನಿಮ್ಮ ಓದು ಹೆಚ್ಚಾದಂತೆ, ಅದರಲ್ಲಿ ನೀವು ಪರಿಣಿತರಾದಂತೆ ನೀವು ಕೇಳುವ ಪ್ರಶ್ನೆಗಳ ಸಂಖ್ಯೆಯೂ ಕಡಿಮೆಯಾಗುತ್ತದೆ ಎಂಬುದನ್ನು ಗಮನಿಸಿ.

ನಮ್ಮ ಬುದ್ಧಿಯನ್ನು ಒರೆಗೆ ಹಚ್ಚುವ ಸುಡಕೊ, ಪದಬಂಧ, ಮಕ್ಕಳಿಗಾಗಿ ಚಿತ್ರ ಸ್ಪರ್ಧೆ, ಛಾಯಾಚಿತ್ರಗಳ ಸಹಿತ ಇರುವ ಕಿರು ಬರಹ ಮುಂತಾದವುಗಳನ್ನು ಓದಿಯೇ ಮುಂದಿನ ಪುಟ ತಿರುಗಿಸಿ. ಜೊತೆಗೆ ಹಿಂದೆಂದೋ ಪ್ರಕಟವಾದ ಲೇಖನಗಳಿಗೆ ಬಂದ ಪ್ರತಿಕ್ರಿಯೆಗಳು, ಅದಕ್ಕೆ ಮತ್ತೆ ಮೂಲ ಲೇಖಕರಿಂದ ಬಂದ ಸಮಜಾಯಿಷಿ.. ಈ ಎಲ್ಲದರ ಕೋಟೆಯೊಳಗೆ ನಮ್ಮ ಓದು ಬಂಧಿಯಾಗಬೇಕು. ಆಗಲೇ ನಮ್ಮ ಓದು ಪರಿಪೂರ್ಣವಾಗುವುದು.

ದಿನಪತ್ರಿಕೆಗಳಲ್ಲಿ ವಾರಕ್ಕೊಮ್ಮೆ ಪ್ರಕಟವಾಗುವ ವಾರದ ಪುರವಣಿಗಳು ನಮ್ಮ ಸಾಹಿತ್ಯ, ಪರಂಪರೆಗಳ ಬಗೆಗಿನ ಟಿಪ್ಪಣಿ, ಐತಿಹಾಸಿಕ ಸ್ಮಾರಕಗಳ ಬಗೆಗಿನ ವಿವರ, ವ್ಯಕ್ತಿ ವಿಶೇಷ, ಪ್ರವಾಸ ಸಾಹಿತ್ಯ ಮುಂತಾದವುಗಳಿಂದ ಸಮೃದ್ಧವಾಗಿರುತ್ತದೆ. ಅವುಗಳ ಓದು ಕ್ರಮೇಣ ನಿಮ್ಮ ಓದಿನ ಹಸಿವನ್ನು ನಿಮಗೆ ಅರಿವಿಲ್ಲದಂತೆಯೇ ಹೆಚ್ಚಿಸುತ್ತದೆ. ವ್ಯಕ್ತಿತ್ವ ವಿಕಸನಗೊಳಿಸುತ್ತದೆ. ಆದ್ದರಿಂದ ಓದು ನಿಮ್ಮ ದಿನಚರಿಯ ಒಂದು ಭಾಗವಾಗಲಿ.